Transfer of B.D.O to chitapur Block

ಶ್ರೀ ಬಿ.ಆರ್. ಯಾವಗಲ್(ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ರಾಜ್ಯ ಸಚಿವರು).—ನಿಯಮ ೩೫ ಅಡಿಯಲ್ಲಿ ಶ್ರೀ ಎಸ್. ಬಂಗಾರಪ್ಪನವರ ಪ್ರಶ್ನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.—

"ಚಿತಾಪುರ ಬ್ಲಾಕಿನ ಕ್ಷೇತ್ರಾಭಿವೃದ್ಧಿ ಅಧಿಕಾರ ಶ್ರೀ ವೈಜನಾಥರವರ, ವರ್ಗಾವಣೆ ಬಗ್ಗೆ ಹೇಳಿಂವುದಾದರೆ, ಸದರಿಯವರು ದಿನಾಂಕ ೨೨-೧೨-೧೯೮೫ರಲ್ಲಿ ತಮ್ಮ ಸ್ವಾನದಿಂದ ಬಿಡುಗಡೆಯಾಗಿ, ರಜೆಯ ಮೇಲೆ ತೆರಳಿರುತ್ತಾರೆ. ಚಿತಾಪುರ ತಾಲ್ಲೂಕು ತಹಸೀಲ್ದಾರರು ಕ್ಷೇತ್ರಾಭಿವೃದ್ಧಿ ಅಧಿಕಾರಿಯವರ ಕೆಲಸವನ್ನು (ಇನ್‌ಚಾರ್ಜ್) ನಿರ್ವಹಿಸುತ್ತಿರುತ್ತಾರೆ.

ಗುಲ್ಬರ್ಗ ಜಿಲ್ಲಾಧಿಕಾರಿಗಳು ಸದರಿ ಶ್ರೀ ವೈಜನಾಥ್‌ರವರನ್ನು ಚಿತಾಪುರದಿಂದ ವರ್ಗಾವಣೆ ಮಾಡಿ, ಶ್ರೀ ಮೊಹ್ಮದ್ ಇಬ್ರಾಹಿಂ, ವಿಶೇಷ ತಹಸೀಲ್ದಾರ, (ಭೂ ಸುಧಾರಣೆ), ಆಲಂದ್, ಇವರನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ. ಚಿತಾಪುರಕ್ಕೆ ತೈನಾಕೆ ಮಾಡಲು ಶಿಪಾರಸ್ಸು ಮಾಡಿರಂತ್ತಾರೆ. ಈ ವಿಷಯವು ಪರಿಶೀಲನೆಯಲ್ಲಿದೆ.

ಚಿತಾಪುರದ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಮತ್ತು ಕಿರಿಯ ಅಭಿಯಂತರರು ವೆಸಗಿರುವ ಅಕ್ರಮಗಳ ಬಗ್ಗೆ ಸೇಡಂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರವರು ತನಿಖೆ ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿ. ಗುಲ್ಬರ್ಗಾ ಅವರನ್ನು ಶೀಘ್ರವಾಗಿ ತನಿಖಾ ವರದಿಯನ್ನು ಪಡೆದು ಅವರ ಅಭಿಲೇಖಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಕೋರಿದೆ.

ಜಿಲ್ಲಾಧಿಕಾರಿಗಳಿಂ ವರದಿಯನ್ನು ಕಾಯಂದೆ, ಈ ವರದಿ ಬಂದಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ(ಮುಂ.ವ)

ಶ್ರೀ ಕೆ.ಎಚ್.ಪಾಟೀಲ್(ಗದಗ).—ಮಾನ್ಯ ಸಭಾಧ್ಯಕ್ಷರೇ. ನಿನ್ನೆ ದಿವಸ ವ್ಯವಸಾಯದ ಬಗ್ಗೆ ಏನೇನು ಮಾಡಬೇಕು ಎನ್ನುವ ಬಗ್ಗೆ ಸಲಹೆಗಳನ್ನು ಕೊಟ್ಟಿ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವ್ಯವಸಾಯದ ವಿಷಯವಾಗಿ ಎಷ್ಟು ಮಹತ್ವವನ್ನು ಕೊಡಬೇಕಾಗಿತ್ತೋ ಅಷ್ಟು ಮಹತ್ವವನ್ನು ಕೊಟ್ಟಿಲ್ಲ ಎನ್ನುವ ಬಗ್ಗೆ ಕೂಡ ಮಾತನಾಡಬೇಕಾಗಿದೆ. ಇದು ಅಷ್ಟೇ ಅಲ್ಲ ವ್ಯವಸಾಯದ ವಿಷಯವಾಗಿ ಮುಂತೆ ಇಂದಿನ ಬರಗಾಲದ ಪರಿಸ್ಥಿತಿ ಮುಂದೆ ಬರಗಾಲದಲ್ಲಿ ಬರಲಿರುವ ಪರಿಸ್ಥಿಯ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಉಲ್ಲೇಖನವೂ ಕೂಡ ಇಲ್ಲ. ಸರ್ಕಾರದವರು ಅಧಿಕಾರಕ್ಕೆ ಬರುವಾಗ ಜನರಿಗೆ ಕೊಟ್ಟ ವಚನವನ್ನು ಪಾಲನೆ ಮಾಡಿದ್ದಾರೆ ಎಂದೂ ಮಾನ್ಯ ರಾಜ್ಯಪಾಲರು ಪ್ರಶಂಸೆ ಮಾಡಿದ್ದಾರೆ. ಆದರೆ ಈ ಪ್ರಶಂಸೆ ಸಾರ್ವಜನಿಕವಾಗಿ ನಿಜಸ್ಥಿತಿಯನ್ನು ಹೇಳಿದಾಗ ಅದು ಅಪ್ಪೇ ಅಪ್ರಸ್ತುತವಾಗುತ್ತದೆ ಎನ್ನುವ ಮಾತು ನಮಗೆಲ್ಲರಿಗೂ ವೇದ ವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳು ಇವೆ. ಮಾನ್ಯ ಜೆ. ಎಚ್. ಪಟೇಲ್‌ರವರು ಹಿರಿಯರು, ಬಹಳ ಅನುಭವಶಾಲಿಗಳು ಮಂತ್ರಿಗಳಾಗಿರುವಾಗ ಈ ಸಕ್ಕರೆ ಕಾರ್ಖಾನೆಗಳು ಬಹಳ ಉಚ್ಚಾಯಂಮಟ್ಟಕ್ಕೆ ಹೋಗಬೇಕಾಗಿತ್ತು ಎಂದು ಹೇಳಂವಾಗ ಮಾನ್ಯ ಮಂಬ್ರಿ ಮಂತ್ರಿಗಳು ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿರತಕ್ಕಂಥ ಕಾರ್ಖಾನೆಗಳ ಬಗ್ಗೆ ಹೋಲಿಸಿ ನಮ್ಮಲ್ಲಿ ನಂಬರ್ ೧, ನಂಬರ್ ೨ ಗೆ ಹೋಗಿದ್ದೇವೆಂದು ಹೇಳಿದರು. ಆದರೆ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ. ಬಹಳ ಬೇಸರದಿಂದ ಹೇಳಬೇಕಾಗುತ್ತದೆ. ಇಡೀ ರಾಜ್ಯದಲ್ಲಿರಂವ ಸಕ್ಕರೆ ಕಾರ್ಖಾನೆಗಳ ಪೈಕಿ ಒಂದೆರಡನ್ನು ಬಿಟ್ಟರೆ ಉಳಿದ ಕಾರ್ಖಾನೆಗಳನ್ನು ತೆಗೆದುಕೊಂಡರೆ ಅವು ಮುಚ್ಚ್ಚತಕ್ಕಂಥ ಪರಿಸ್ಥಿತಿಗೆ ಬಂದಿರುತ್ತವೆ. ಮತ್ತೆ ಉಳಿದ ಕಾರ್ಖಾನೆಗಳಲ್ಲಿ ಅಪ್ಪೋ ಇಪ್ಪೋ ಬದುಕಿ ಉಳಿದಿರತಕ್ಕಂಥ ಕಾರ್ಖಾನೆಗಳನ್ನು ಅಭಿವೃದ್ಧಿ ಪಡಿಸಂವುದಕ್ಕೆ ಮತ್ತು ಸಂಪೂರ್ಣವಾಗಿ ಮುಂಚ್ಚ್ಚಿರತಕ್ಕಂಥ ಕಾರ್ಖಾನೆಗಳನ್ನು ಪುನರ್ ಪ್ರಾರಂಭ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದು ನೋಡಿದರೆ ಅಂಥ ಯಾವ ಪ್ರಯತ್ನವನ್ನೂ ಕೂಡ ಮಾಡಿದಂತಿಲ್ಲ.